1	2	3	4
			ಸೇಡಂ ಸೇಡಂ, ಮುಳಖೇಡ,
		ಚಿಂಚೋಳಿ	ಚಿಂಚೋಳಿ, ಚಂದ್ರಂಪಳ್ಳಿ,
		ಜೇವರ್ಗಿ	ಜೇವರ್ಗಿ
		ಚಿತ್ತಾಪುರ	ಕಲ್ಲಿ,
19.	ಬೀದರ್	ಬೀದರ್	ಬೀದರ್
		ಹುಮನಾಬಾದ್	ಹುಮನಾಬಾದ್, ಜಲಸಂಗಿ
		ಬಸವಕಲ್ಯಾಣ	ಬಸವಕಲ್ಯಾಣ, ನಾರಾಯಣಪುರ
		ಭಾಲ್ಕಿ	ಕಾರಂಜ ಪ್ರಾಜೆಕ್ಟ.

II ಮಂಗಳೂರು ನಗರದ ಕಾರ್ಪೊರೇಷನ್ ಪರಿಮಿತಿಗಳನ್ನು ಬಿಟ್ಟು ರಾಜ್ಯದ ಇಡೀ ಕರಾವಳಿ ಪಟ್ಟಿಯಲ್ಲಿನ ಅನುಮೋದಿತ ಸ್ಥಳಗಳು.

III ರಸ್ತೆಯ ಸೌಲಭ್ಯ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿನ ಅನುಮೋದಿತ ಸ್ಥಳಗಳು.

ಮೈಸೂರು ಹಾಲು ಒಕ್ಕೂಟದ ವಾರ್ಷಿಕ ಸಭೆ.

2170 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಹಾಲೂ ಒಕ್ಕೂಟದ ವಾರ್ಷಿಕ ಸಭೆಯನ್ನು ಮುಂದೂಡುತ್ತಾ ಬಂದಿರುವುದು ನಿಜವೇ? ಹಾಗಿದ್ದಲ್ಲಿ ಮುಂದೂಡಿಸಲು ಕಾರಣಗಳೇನು?

ಆ) ಒಕ್ಕೂಟದ ಆಂತರಿಕ ಲೆಕ್ಕ ಪರಿಶೋಧಕರು ದಿನಾಂಕ 12.7.95ರಂದು ದಿನನಿತ್ಯದ ವ್ಯವಹಾರಗಳ ಬಗ್ಗೆ ಲೆಕ್ಕ ತಪಾಸಣೆ ಮಾಡಿ ಒಕ್ಕೂಟದಲ್ಲಿ ನಡೆಸಿರುವಂತಹ ಅವ್ಯವಹಾರ ಹಾಗೂ ನ್ಯೂನತೆಗಳ ಬಗ್ಗೆ ವರದಿ ನೀಡಿರುವುದು ನಿಜವೇ?

ಇ) ಹಾಗಿದಲ್ಲಿ ಆ ಅವ್ಯವಹಾರಗಳು ಯಾವುವು? ಹಾಗೂ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಅ) ಹೌದು. ಮೈಸೂರಿನ ಹಾಲು ಒಕ್ಕೂಟದ ವಾರ್ಷಿಕ ಮಹಾ ಸಭೆ ಮತ್ತು ಚುನಾವಣೆಯನ್ನು ಉಚ್ಚ ನ್ಯಾಯಾಲಯದ ಮತ್ತು 908:93ರಲ್ಲಿ ಒಕ್ಕೂಟದ ಚುನಾವಣಾ ಕಾರ್ಯಕ್ರಮ ಪಟ್ಟಿಯ (ಕ್ಯಾಲೆಂಡರ್ ಆಫ್ ಇವೆಂಟ್ಸ)ಮೇಲೆ ನೀಡಲಾದ ತಡೆಯಾಜ್ಞೆಗಳ ಕಾರಣ ಮುಂದೂಡಲಾಗಿತ್ತು. ಸದರಿ ತಡಯಾಜ್ಞೆ ತೆರವಾದ ನಂತರ ವಾರ್ಷಿಕ ಮಹಾ ಸಭೆ ಮತ್ತು ಚುನಾವಣೆಯನ್ನು ದಿನಾಂಕ 31.8.1995ರಂದ ನಡೆಸಲಾಗಿದೆ.

ಆ) ಪೂರ್ವಭಾವಿ ಲೆಕ್ಕ ಪರಿಶೋಧಕರು ಈ ಕೆಳಕಂಡ ನ್ಯೂನತೆಗಳನ್ನು ಗುರುತಿಸಿರುತ್ತಾರೆ.

1. ಸಂಸ್ಥೆಯ ಮುಖ್ಯಸ್ಥರ ಅನುಮತಿಯಿಲ್ಲದೆ ಉಪ ವ್ಯವಸ್ಥಾಪಕರು (ಹಣಕಾಸು) ಇವರು ಲೆಕ್ಕ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಯೊಬ್ಬರಿಗೆ ಸಣ್ಣ ಉಳಿತಾಯವನ್ನು ಉತ್ತೇಜಿಸುವ ಸಲುವಾಗಿ ಸಣ್ಣ ಉಳಿತಾಯ ಇಲಾಖೆಗೆ ಕಮಿಷನ್ ಅನ್ನು ಪಡೆಯಲು ಅನುಮತಿಸಿರುತ್ತಾರೆ.

2. ಒಕ್ಕೂಟಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸರಬರಾಜು ಮಾಡಲು:ಕಾಮಗಾರಿ ಕೆಲಸಗಳಿಗಾಗಿ ವಿವಿಧ ಸಂಸ್ಥೆಗಳಿಗೆ ಮುಂಗಡವಾಗಿ ನೀಡಿರುವ ರೂ. 60.15ಲಕ್ಷ ರೂ.ಗಳ ಮರು ಹೊಂದಾಣಿಕೆ ಆಗದಿರುವುದು.

3. ಒಕ್ಕೂಟವು ಧಾರವಾಡ ಪಶು ಆಹಾರ ಘಟಕದಿಂದ 1990-91ನೇ ಸಾಲಿನಲ್ಲಿ ಖರೀದಿಸಿದ ಪಶು ಆಹಾರ ಬಾಬ್ತು ರೂ. 3.28 ಲಕ್ಷ ಹಣವನ್ನು 2 ಬಾರಿ ಪಾವತಿ ಮಾಡಿರುವುದು.

ಮೈಸೂರು ಜಿಲ್ಲಾಧಿಕಾರಿಗಳು ಪ್ರಾಥಮಿಕ ತನಿಖೆಗೆ ಆದೇಶಿಸಿದ್ದು, ತನಿಖಾ ವರದಿಯ ಆಧಾರದ ಮೇಲೆ ಹಾಗೂ ಜಿಲ್ಲಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ದಿನಾಂಕ 5.9.1995ರಿಂದ ಮೈಸೂರು ಹಾಲೂ ಒಕ್ಕೂಟದ ಉಪ ವ್ಯವಸ್ಥಾಪಕರು (ಹಣಕಾಸು) ಇವರನ್ನು ವಿವರವಾದ ವಿಚಾರಣೆಯನ್ನು ಕಾಯ್ದಿರಿಸಿ ಆಮಾನತ್ತಿನಲ್ಲಿ ಇಡಲಾಗಿದೆ.

ಸಿಂಧನೂರು ತಾಲ್ಲೂಕಿಗೆ ಶುದ್ಧ ಕುಡಿಯುವ ನೀರಿನ ಸರಬರಾಜು.

2171 - ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕಿನ ಎಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಮತ್ತು ಉಪ್ಪಿನ ಅಂಶ ಇರುವುದರ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಶುದ್ಧ ಕುಡಿಯುವ ನೀರನ್ನು ಎಷ್ಟು ಸಮಯದಲ್ಲಿ ಜನರಿಗೆ ಪೂರೈಸಲಾಗುವುದು?

ಇ) ಸಿಂಧನೂರು ತಾಲ್ಲೂಕನ್ನು ಕೇಂದ್ರಸರ್ಕಾರದ ರಾಜೀವ್ ಗಾಂಧಿ ವಾಟರ್ ಟೆಕ್ನಾಲಜಿ ಮಿಷನ್ ಯೋಜನೆಯಲ್ಲಿ ಆಳವಡಿಸಲಾಗಿದೆಯೇ? ಆಳವಡಿಸಿದ್ದಲ್ಲಿ, ಯೋಜನೆಯನ್ನು ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಸಿಂಧನೂರು ತಾಲ್ಲೂಕಿನ ಎಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಮತ್ತು 77 ಹಳ್ಳಿಗಳಲ್ಲಿ ಉಪ್ಪಿನ ಅಂಶವು ಕುಡಿಯುವ ನೀರಿನಲ್ಲಿ ಇದೆ.